ದಿನಾಂಕಃ 26.09.2024 ರಂದು ಸಾಕ್ಷಿಯನ್ನು ಪುನಃ ಕರೆಸಿ ಪ್ರಮಾಣ ವಚನ ಭೋಧಿಸಲಾಯಿತು.

ಮುಂದುವರೆದ ಪಾಟೀಸವಾಲುಃ- 1 ರಿಂದ 4 ಮತ್ತು 5 ನೇ ಎದುರುದಾರರ ವಾರಸುದಾರರು ಮತ್ತು 47 ರಿಂದ 55 ನೇ ಎದುರುದಾರರ ಪರವಾಗಿ ಶ್ರೀ. ಎಂ. ಜೆ. ಜೆ. ವಕೀಲರಿಂದ -

31. O.S. 46/2010 ಪ್ರಕರಣದಲ್ಲಿ ನನ್ನ ಪರವಾಗಿ ಮತ್ತು ರೂಪ ವಿಲ್ಸನ್ ಮತ್ತು ಡೇವಿಡ್ ಮತ್ತು ಲಕ್ಷ್ಮಿಪ್ರಸಾದ್ ಮತ್ತು ಸಿ. ಪುಷ್ಪಲತಾ ರವರ ಪರವಾಗಿ ಒಬ್ಬರೇ ವಕೀಲರು ಹಾಜರಾಗುತ್ತಾರೆ ಎಂದರೆ ಸರಿ. O.S. 46/2010 ಪ್ರಕರಣದಲ್ಲಿ ಮೇಲೆ ಹೇಳಿದ 4 ಜನ ವ್ಯಕ್ತಿಗಳು ಸಲ್ಲಿಸಿರುವ ಪ್ರಮಾಣ ಪತ್ರದಲ್ಲಿ ಅಂದರೆ ಆ ವ್ಯಕ್ತಿಗಳು ತಮ್ಮ ಮುಖ್ಯ ವಿಚಾರಣೆಗೆ ಬದಲಾಗಿ ಸಲ್ಲಿಸಿರುವ ಪ್ರಮಾಣ ಪತ್ರಗಳಿಗೆ ನನ್ನ ಯಾವುದೇ ತಕರಾರು ಇಲ್ಲ ಎಂದು ಹೇಳಿದ್ದೇನೆ.

32. ನಮ್ಮ ತಂದೆಯವರ ಮರಣದ ನಂತರ O.S. 46/2010 ರಲ್ಲಿ ನಾನು ಹಾಜರಾಗಿದ್ದೇನೆ ಮತ್ತು ಪ್ರಕರಣವನ್ನು ನಡೆಸುತ್ತಾ ಇದ್ದೇನೆ ಎಂದರೆ ಸರಿ. ಸಾಕ್ಷಿಯು ಮುಂದುವರೆದು " ಸದರಿ O.S. 46/2010 ಪ್ರಕರಣವು ವಜಾ ಆಗಿದೆ " ಎಂದು ನುಡಿದಿದ್ದಾರೆ.

33. O.S. 46/2010 ರಲ್ಲಿ ನನ್ನ ತಂದೆಯಾದ ಪಶುಪತಿ ರವರು ತಮ್ಮ ಲಿಖಿತ ಹೇಳಿಕೆಯನ್ನು ಸಲ್ಲಿಸಿದ್ದರು ಎಂದರೆ ಸರಿ. ಸದರಿ ಲಿಖಿತ ಹೇಳಿಕೆಯನ್ನು ನಿಶಾನೆಯನ್ನಾಗಿ ಗುರುತಿಸಬೇಕು ಎಂಬುದಾಗಿ ಮಾನ್ಯ ವಕೀಲರು ಪ್ರಾರ್ಥಿಸಿದ್ದಾರೆ. ಆದರೆ ಈ ಸಾಕ್ಷಿದಾರರು ಈ ದಾಖಲೆಗೆ ಪಕ್ಷಕಾರರು ಆಗಿರುವುದಿಲ್ಲ ಮತ್ತು ಈ ಸಾಕ್ಷಿಯ ಸಹಿ ಇರುವುದಿಲ್ಲ ಮತ್ತು ಆ ಕಾರಣದಿಂದ ಈ ದಾಖಲೆಯು ಈ ಸಾಕ್ಷಿದಾರರ ಹಿಂದಿನ ಹೇಳಿಕೆ (previous statement) ಎಂಬ ವ್ಯಾಪ್ತಿಯ ಒಳಗೆ ಬರುವುದಿಲ್ಲ. ಆದಕಾರಣದಿಂದ ILR 1999 Karnataka page 4634 (Amarnath V/s Puttamma) ಪ್ರಕರಣದಲ್ಲಿ ವಿಷಧೀಕರಿಸಿರುವ ಕಾನೂನಿನ ಅಂಶದಂತೆ ಈ ದಾಖಲೆಯನ್ನು ಕೇವಲ identification ಉದ್ದೇಶಕ್ಕಾಗಿ **ನಿಶಾನೆ ಎಸ್**-1 ಎಂದು ಗುರುತಿಸಿದೆ.

34. ಈಗ ನನಗೆ ತೋರಿಸಿದ ದಾಖಲೆಗಳು ಮೇಲೆ ಹೇಳಿದ ರೂಪ ವಿಲ್ಸನ್ ಮತ್ತು ಡೇವಿಡ್ ಮತ್ತು ಲಕ್ಷ್ಮಿಪ್ರಸಾದ್ ಮತ್ತು ಸಿ. ಪುಷ್ಪಲತಾ ರವರು O.S. 46/2010 ರಲ್ಲಿ ಸಲ್ಲಿಸಿರುವ ಮುಖ್ಯ ವಿಚಾರಣೆಯ ಪ್ರಮಾಣ ಪತ್ರಗಳು ಆಗಿವೆ ಎಂದರೆ ನನಗೆ ಗೊತ್ತಿಲ್ಲ. ಈ ದಾಖಲೆಗಳನ್ನು ನಿಶಾನೆಗಳನ್ನಾಗಿ ಗುರುತಿಸಬೇಕು ಎಂಬುದಾಗಿ ಮಾನ್ಯ ವಕೀಲರು ಪ್ರಾರ್ಥಿಸಿದ್ದಾರೆ. ಈ ದಾಖಲೆಗಳು ಸಹಾ ಈ ಸಾಕ್ಷಿಯ ಹಿಂದಿನ ಹೇಳಿಕೆಗಳು ಎಂಬ ವ್ಯಾಪ್ತಿಯಲ್ಲಿ ಬರುವುದಿಲ್ಲ. ಆದಕಾರಣದಿಂದ ಕೇವಲ identification ಉದ್ದೇಶಕ್ಕಾಗಿ ರೂಪ ವಿಲ್ಸನ್ ರವರ ಪ್ರಮಾಣ ಪತ್ರವನ್ನು **ನಿಶಾನೆ ಎಸ್–2** ಎಂದು, ಲಕ್ಷ್ಮಿಪ್ರಸಾದ್ ರವರ ಪ್ರಮಾಣ ಪತ್ರವನ್ನು **ನಿಶಾನೆ ಎಸ್–3** ಎಂದು ಮತ್ತು ಮಾರ್ಗರೇಟ್ ರವರ ಪ್ರಮಾಣ ಪತ್ರವನ್ನು **ನಿಶಾನೆ ಎಸ್–4** ಎಂದು ಮತ್ತು ಪುಷಲತಾ ರವರ ಪ್ರಮಾಣ ಪತ್ರವನ್ನು **ನಿಶಾನೆ ಎಸ್–5** ಎಂದು ಗುರುತಿಸಿದೆ.

35. O.S. 46/2010 ರಲ್ಲಿ ಆಗಿರುವ ತೀರ್ಪಿನ ವಿರುದ್ದ ಈ ಪ್ರಕರಣದ 1 ರಿಂದ 5ನೇ ಎದುರುದಾರರು ಕರ್ನಾಟಕ ಉಚ್ಚ ನ್ಯಾಯಾಲಯದಲ್ಲಿ RFA 958/2024 ಎಂಬ ಪ್ರಕರಣವನ್ನು ಮಾಡಿದ್ದಾರೆ ಎಂದರೆ ನನಗೆ ಗೊತ್ತಿಲ್ಲ. ಆ ರೀತಿ RFA 958/2024 ಪ್ರಕರಣವನ್ನು ಸಲ್ಲಿಸಿರುವ ವಿಷಯವು ನನಗೆ ತಿಳಿದಿದೆ, ಹಾಗಿದ್ದರೂ ಸಹಾ ಆ ವಿಷಯ ನನಗೆ ತಿಳಿದಿಲ್ಲ ಎಂದು ನಾನು ಸುಳ್ಳು ಸಾಕ್ಷ್ಯವನ್ನು ನುಡಿಯುತ್ತಾ ಇದ್ದೇನೆ ಎಂದರೆ ಸುಳ್ಳು. ಮೇಲೆ ಹೇಳಿದ 4 ಜನ ವ್ಯಕ್ತಿಗಳು ನ್ಯಾಯಾಲಯದಲ್ಲಿ ಸಾಕ್ಷಿ ನುಡಿದಿರುವ ವಿಷಯವು ನನಗೆ ತಿಳಿದಿದೆ, ಹಾಗಿದ್ದರೂ ಸಹಾ ನಾನು ಸುಳ್ಳು ಸಾಕ್ಷ್ಯವನ್ನು ನುಡಿಯುತ್ತಾ ಇದ್ದೇನೆ ಎಂದರೆ ಸುಳ್ಳು.

ಮರುವಿಚಾರಣೆಃ– ಇಲ್ಲ.

(ನನ್ನ ಉಕ್ತಲೇಖನದ ಮೇರೆಗೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಲಾಯಿತು)

ಓ. ಹೇ. ಕೇ. ಸ. ಒ

ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು
ಮಂಡ್ಯ.